# ಶಬರಿ

**ಚಿತ್ರ ನುಡಿ: ಡಾ. ತಾರಿಣಿ ಶುಭದಾಯಿನಿ**
ಲೇಖಕಿ ಮತ್ತು ಸಹಪ್ರಾಧ್ಯಾಪಕಿ, ಸ.ಪ್ರ.ದ.ಕಾಲೇಜು,
ಜವಗೊಂಡನಹಳ್ಳಿ, ಹಿರಿಯೂರು (ತಾ)




೧೦.೦೩.೨೦೧೭ರ
ಮುಂಜಾನೆ ೧೧.೦೦ ರಿಂದ ೧.೦೦
ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ

ಶಬರಿ ಚಿತ್ರದಲ್ಲಿ ಒಂದು ಊರಿನ ಹೊರಭಾಗದಲ್ಲಿ, ನಿಸರ್ಗದ ನಡುವೆ ಬುಡಕಟ್ಟು ಜನಾಂಗವೊಂದು ವಾಸವಾಗಿರುತ್ತದೆ. ಈ ಶಬರಿಯು ಒಳ್ಳೆಯ ದಿನಗಳಿಗಾಗಿ, ಬದಲಾವಣೆಗಾಗಿ ಕಾಯುತ್ತಾಳೆ, ಕುದಿಯುತ್ತಾಳೆ, ನೊಂದವರ ಗೌರವಕ್ಕೆ ಪಾತ್ರಳಾಗುತ್ತಾಳೆ. ಕಥೆಯು ಬುಡಕಟ್ಟಿನ ಜನಾಂಗ ಹಾಗೂ ಊರಿನ ಒಡೆಯನ ದೌರ್ಜನ್ಯದ ವಿರುದ್ಧ ಸಿಡಿದೆದ್ದ ಹೆಣ್ಣು. "ಶಬರಿ" ಎಂದರೆ ಒಳ್ಳೆಯ ದಿನಗಳಿಗೆ ಕಾಯುವ ಭಕ್ತಿ; ಬದಲಾವಣೆಗಾಗಿ ಕುದಿಯುವ ಶಕ್ತಿ. ಮಡಿ, ಮೈಲಿಗೆಯಿಲ್ಲದ ಮನಸ್ಸಿನ ಸಂಕೇತ; ಗುಡಿ ಕಟ್ಟದೆ ಗುಡಿಸಲಿಗೆ ಅರ್ಥ ತಂದುಕೊಟ್ಟ ಚಲನಶೀಲ ಸಂಸ್ಕೃತಿಯ ರೂಪಕ.

**ಕಲಾವಿದರು:** ಕಿಶೋರ್, ಹಂಸ ಹಿರೇಹಳ್ಳಿ, ಜಯಕುಮಾರ್, ಪ್ರಮೀಳಾ ಜೋಷಾಯ್, ಸುಂದರರಾಜು ಅರಸು

# ಹಗಲು ವೇಷ

**ಚಿತ್ರ ನುಡಿ: ಪ್ರೊ. ಪ್ರಶಾಂತ್ ನಾಯಕ್ ಜಿ**
ಸಾಹಿತಿಗಳು ಮತ್ತು ಪ್ರಾಧ್ಯಾಪಕರು
ಕನ್ನಡ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ




೧೦.೦೩.೨೦೧೭ರ
ಅಪರಾಹ್ನ ೨.೦೦ ರಿಂದ ೪.೦೦
ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ

ಹಗಲು ವೇಷ ಚಿತ್ರವು ಬುಡಕಟ್ಟು ಜನಾಂಗದ ಕೂಲಿ ಯುವಕನೊಬ್ಬ ಬ್ರಿಟಿಷರ ವಿರುದ್ಧ ಬಂಡೇಳುವ ಕಥಾವಸ್ತುವನ್ನು ಒಳಗೊಂಡಿದೆ. "ಹಗಲು ವೇಷದವರು" ಅಥವಾ "ಬುಡಗ ಜಂಗಮರು" "ಬಹುರೂಪಿ" ಹೆಸರಿನ ಬುಡಕಟ್ಟಿನವರು. ಹಗಲೆಲ್ಲಾ ವೇಷಹಾಕಿ ಊರಲ್ಲಿ ಪ್ರದರ್ಶಿಸಿ ಧಾನ್ಯಾದಿಗಳನ್ನು ಸಂಗ್ರಹಿಸುವ ಕಸುಬಿನವರು. ಕಲೆ ಮತ್ತು ಕಸುಬು ಒಂದಾದ ಇವರ ಬದುಕನ್ನು ಹೇಳುತ್ತಲೇ ಪ್ರಭುತ್ವಕ್ಕೆ ಪ್ರತಿರೋಧಿಯಾಗುವ ಪ್ರತೀಕಾತ್ಮಕ ಸಿನಿಮಾ "ಹಗಲು ವೇಷ".

**ಕಲಾವಿದರು:** ಶಿವರಾಜ್‌ಕುಮಾರ್, ಕರಿಬಸವಯ್ಯ, ಕೃಷ್ಣೇಗೌಡ, ತಾರಾ

# ಬರಗೂರು ಸಿನಿ-ದೃಶ್ಯೋತ್ಸವ

ತಳಮೂಲ ತಲ್ಲಣಗಳ ದೃಶ್ಯಕಾವ್ಯ......

## ಸಮಾರೋಪ ಸಮಾರಂಭ

೧೧ನೇ ಮಾರ್ಚ್, ೨೦೧೭, ಬೆಳಗ್ಗೆ ೧೦.೩೦ ಗಂಟೆಗೆ
ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ

ಅಧ್ಯಕ್ಷತೆ
**ಪ್ರೊ.ಎ.ಎಚ್.ರಾಜಾಸಾಬ್**
ಮಾನ್ಯ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ

ಗೌರವ ಮುಖ್ಯ ಅತಿಥಿಗಳು
**ನಾಡೋಜ. ಪ್ರೊ.ಬರಗೂರು ರಾಮಚಂದ್ರಪ್ಪ**
ನಿರ್ದೇಶಕರು, ಬೆಂಗಳೂರು

**ಪ್ರೊ.ಎಂ.ವೆಂಕಟೇಶ್ವರಲು**
ಮಾನ್ಯ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ

ಮುಖ್ಯ ಅತಿಥಿಗಳು
**ಡಾ.ಹಂಸಲೇಖ**
ಜನಪ್ರಿಯ ಸಂಗೀತ ನಿರ್ದೇಶಕರು, ಬೆಂಗಳೂರು

**ಶ್ರೀ ಸುರೇಶ್ ಅರಸು**
ಪ್ರಸಿದ್ಧ ಚಲನಚಿತ್ರ ಸಂಕಲನಕಾರರು

**ಶ್ರೀ ಸುಂದರರಾಜ್**
ಜನಪ್ರಿಯ ಚಲನಚಿತ್ರ ಹಿರಿಯ ನಟರು

**ಶ್ರೀ ಕುಮಾರ್‌ಗೋವಿಂದ್**
ಜನಪ್ರಿಯ ನಾಯಕ ನಟ, ಬೆಂಗಳೂರು

**ಡಾ. ಸುಂದರರಾಜ್ ಅರಸು**
ಪ್ರಾಧ್ಯಾಪಕರು ಮತ್ತು ಕಲಾವಿದರು, ಬೆಂಗಳೂರು

**ಡಾ॥ ಶಮಿತ ಮಲ್ನಾಡ್**
ಸಂಗೀತ ನಿರ್ದೇಶಕರು, ಬೆಂಗಳೂರು

**ಶ್ರೀ ನಟರಾಜ್‌ಶಿವು**
ಸಹನಿರ್ದೇಶಕರು, ಮೈಸೂರು

**ಶ್ರೀ ಪ್ರವೀಣ್**
ಸಹನಿರ್ದೇಶಕರು, ಬೆಂಗಳೂರು

# ತುಮಕೂರು ವಿಶ್ವವಿದ್ಯಾನಿಲಯ
ಮತ್ತು
# ಭೂಮಿ ಬಳಗ (ರಿ.,), ತುಮಕೂರು



# ಬರಗೂರು ಸಿನಿ-ದೃಶ್ಯೋತ್ಸವ

ತಳಮೂಲ ತಲ್ಲಣಗಳ ದೃಶ್ಯಕಾವ್ಯ......

೮, ೯, ೧೦ ಮತ್ತು ೧೧ ನೇ ಮಾರ್ಚ್, ೨೦೧೭

ತುಮಕೂರು ವಿಶ್ವವಿದ್ಯಾನಿಲಯ





# ಉದ್ಘಾಟನಾ ಸಮಾರಂಭ

೮ನೇ ಮಾರ್ಚ್, ೨೦೧೭, ಬೆಳಗ್ಗೆ ೧೦.೩೦ಕ್ಕೆ
ಡಾ.ಪಿ.ಸದಾಶಿವಾನಂದಮಯ್ಯ ಕಟ್ಟಡ, ತುಮಕೂರು ವಿಶ್ವವಿದ್ಯಾನಿಲಯ

◆ ಉದ್ಘಾಟನೆ
**ಶ್ರೀ ಗಂಗಾಧರ ಮೊದಲಿಯಾರ್**
ಚಲನಚಿತ್ರ ಇತಿಹಾಸಕಾರರು, ಬೆಂಗಳೂರು

◆ ಅಧ್ಯಕ್ಷತೆ
**ಪ್ರೊ.ಎಂ.ವೆಂಕಟೇಶ್ವರಲು**
ಮಾನ್ಯ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ

◆ ದಿಕ್ಸೂಚಿ ನುಡಿ
**ಪ್ರೊ.ರಂಗಾರಾಜು ವನದುರ್ಗ**
ಸಾಹಿತಿಗಳು ಮತ್ತು ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ

◆ ಮುಖ್ಯ ಅತಿಥಿ
**ಶ್ರೀ ಮುರಳೀಧರ ಹಾಲಪ್ಪ**
ಅಧ್ಯಕ್ಷರು
ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮ
ಕರ್ನಾಟಕ ಸರ್ಕಾರ, ಬೆಂಗಳೂರು

ಡಾ.ನಾಗಭೂಷಣ ಬಗ್ಗನಡು
ಸಂಚಾಲಕರು
ಗಿರಿಜನ ಉಪಯೋಜನೆ

ಡಾ.ರಮೇಶ್ ಬಿ
ಸಂಚಾಲಕರು
ವಿಶೇಷ ಘಟಕ ಯೋಜನೆ

# ತೋರುಗೊಳ್ಳುವ ಚಿತ್ರಗಳು

## ಮರಣ ದಂಡನೆ

**ಚಿತ್ರ ನುಡಿ: ಶ್ರೀ ರಘುನಾಥ ಚ.ಹ.**
ಮುಖ್ಯ ಉಪಸಂಪಾದಕರು, ಪ್ರಜಾವಾಣಿ ದಿನಪತ್ರಿಕೆ



೮.೦೩.೨೦೧೭ರ
ಅಪರಾಹ್ನ ೩.೦೦ ರಿಂದ ೫.೦೦
ಡಾ.ಪಿ.ಸದಾಶಿವಾನಂದಮಯ್ಯ ಕಟ್ಟಡ

ಮರಣದಂಡನೆ ಚಿತ್ರದ ಕೇಂದ್ರ ಪಾತ್ರ–ಕಾರಾಗೃಹದಲ್ಲಿ ಗಲ್ಲಿಗೇರಿಸುವ ಕೆಲಸ ಮಾಡುತ್ತಿದ್ದ ಮುಸ್ಲಿಂ ಯುವಕ – ಹುಸೇನ್. ವಿಪರ್ಯಾಸವೆಂದರೆ ದುಷ್ಟರನ್ನು ಗಲ್ಲಿಗೇರಿಸಿ ಸಂಭ್ರಮಿಸುತ್ತಿದ್ದ ಹುಸೇನ್ ತಾನೇ ಗಲ್ಲಿಗೇರಬೇಕಾದ ಸಂದರ್ಭ ಎದುರಾಗುತ್ತದೆ. ಸಾವನ್ನು ಕೊಡುವುದೇ ಬೇರೆ, ಸಾವನ್ನು ಪಡೆಯುವುದೇ ಬೇರೆ ಎಂಬ ಅನುಭವವದಲ್ಲಿ ಹುಸೇನ್ ತತ್ತರಿಸುತ್ತಾನೆ. ಈ ಚಿತ್ರವು ಆದರ್ಶ ಮತ್ತು ವಾಸ್ತವಗಳನ್ನು ಮುಖಾಮುಖಿಯಾಗಿಸುವ ಸಮಕಾಲೀನ ಸನ್ನಿವೇಶದ ಸಂಕಟದ ಸಂಕೇತವಾಗಿದೆ.

**ಕಲಾವಿದರು:** ಶ್ರೀಕಾಂತ್, ಸುಂದರರಾಜು, ಹಂಸ, ರಜನಿ

## ಬೆಕ್ಕು

**ಚಿತ್ರ ನುಡಿ: ಡಾ.ನಿತ್ಯಾನಂದ ಬಿ. ಶೆಟ್ಟಿ**
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ



೯.೦೩.೨೦೧೭ರ
ಮುಂಜಾನೆ ೯.೩೦ ರಿಂದ ೧೧.೦೦
ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ

ಬೆಕ್ಕು ಚಿತ್ರವು ಮನುಷ್ಯರ ಸುಪ್ತ ಪ್ರಜ್ಞೆಯ ಒಂದು ಸ್ತರದಲ್ಲಿ ಕಾಮನೆಯೂ ಇದ್ದು, ಬಹಿರಂಗ ಪ್ರೇರಣೆಯೊಂದಿಗೆ ಹೊರಬರುವ ಪ್ರಕ್ರಿಯೆ ಮತ್ತು ಅದರಿಂದ ಉಂಟಾಗುವ ಸಾಮಾಜಿಕ ಹಾಗೂ ವೈಯಕ್ತಿಕ ತಳಮಳಗಳನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ. ಚಿತ್ರದ ಒಂದು ಮುಖ್ಯ ಪಾತ್ರವಾದ ಆತ್ಮಾನಂದಸ್ವಾಮಿಯಲ್ಲಿ ಹುಟ್ಟಿ ಬೆಳೆಯುವ ಕಾಮನೆ ಮತ್ತು ಅದನ್ನು ಹತ್ತಿಕ್ಕಲು ನಡೆಸುವ ತಳಮಳಗಳನ್ನು ಮಾನಸಿಕ ನೆಲೆಯಲ್ಲಿ ಅನಾವರಣ ಗೊಳಿಸಲಾಗಿದೆ. ಸ್ವಾಮೀಜಿಯೂ ತನ್ನ ಅನಾಥಾಶ್ರಮದ ಮೇಡಂ ಶೀಲಾಳಲ್ಲಿ ಅನುರಕ್ತನಾಗಿ ಅನುಭವಿಸುವ ತೊಳಲಾಟವು ಹೆಣ್ಣಿನ ಬದುಕನ್ನು ಬಲಿಪಶುಮಾಡುವ ಹಂತ ತಲುಪಿದಾಗ ವೈಯಕ್ತಿಕವೂ ಮಾನಸಿಕವೂ ಆಗಿದ್ದ ಕಾಮನೆಯ ಪರಿಣಾಮ ಸಾಮಾಜಿಕವಾಗುತ್ತದೆ.

**ಕಲಾವಿದರು:** ಕುಮಾರ್ ಗೋವಿಂದ್, ಭಾವನ, ವೈಷ್ಣವಿ, ಅಂಬರೀಶ್ ಸಾರಂಗಿ

## ಸೂರ್ಯ

**ಚಿತ್ರ ನುಡಿ: ಪ್ರೊ. ರಾಜಪ್ಪ ದಳವಾಯಿ**
ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾನಿಲಯ



೯.೦೩.೨೦೧೭ರ
ಬೆಳಗ್ಗೆ ೧೧.೧೫ ರಿಂದ ೧.೧೫
ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ

ಸೂರ್ಯ ಚಿತ್ರವು ಜಮೀನ್ದಾರಿ ಪದ್ಧತಿಯು ನಿರ್ಜೀವತ್ವದತ್ತ ಸಾಗುತ್ತ ಅನುಭವಿಸುವ ತಳಮಳ ಮತ್ತು ಉಲ್ಲಂಘನೆಯ ಸೂರ್ಯೋದಯ ಸಂಕೇತವನ್ನು ಧ್ವನಿಸುತ್ತದೆ. ಜಮೀನ್ದಾರಿ ಅಥವಾ ಫ್ಯೂಡಲ್ ಪದ್ಧತಿಯ ಅವನತಿಯ ಹಾದಿಯಲ್ಲಿ ಪ್ರಜಾ–ಪ್ರಭುತ್ವದ ಅಧಿಕಾರ ಬರುತ್ತಿರುವ ವಾಸ್ತವವನ್ನು ಸೂಕ್ಷ್ಮವಾಗಿ ಹೇಳುತ್ತದೆ. ಈ ಚಿತ್ರವು ರಷ್ಯಾದಲ್ಲಿ ನಡೆದ "ಮಾಸ್ಕೊ" ಅಂತರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿ ಮೆಚ್ಚುಗೆ ಪಡೆದಿತ್ತು. ರಾಜ್ಯ ಪ್ರಶಸ್ತಿಯನ್ನು ಪಡೆಯಿತು.

**ಕಲಾವಿದರು:** ರೋಹಿಣಿ ಹಟ್ಟಂಗಡಿ, ಲೋಕೇಶ್, ಭಾನು ಪ್ರಮೀಳಾ ಜೋಷಾಯ್

## ಕೋಟಿ

**ಚಿತ್ರ ನುಡಿ: ಡಾ. ಪುಷ್ಪಭಾರತಿ ಆರ್.ಎ**
ಮುಖ್ಯಸ್ಥರು, ಕನ್ನಡ ವಿಭಾಗ, ಸ.ಪ್ರ.ದ.ಕಾಲೇಜು, ಕುಣಿಗಲ್



೯.೦೩.೨೦೧೭ರ
ಅಪರಾಹ್ನ ೩.೦೦ ರಿಂದ ೪.೦೦
ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ

ಕೋಟಿ ಚಿತ್ರದಲ್ಲಿ ಸಂಭಾಷಣೆಗಳಿಲ್ಲ ಇದು ಹಾಡುಗಳ ಮೂಲಕವೇ ಇಡೀ ಚಿತ್ರವನ್ನು ನಿರೂಪಿಸಿರುವ ಹೊಸ ಪ್ರಯೋಗಾತ್ಮಕ ಚಿತ್ರ. ರಾಮಾಯಣದ ಅಂದಿನ ಪುರಾಣಕತೆ ಮತ್ತು ಇಂದಿನ ರಾಮ, ರಾವಣ, ಸೀತೆಯರ ವಾಸ್ತವವನ್ನು ತೌಲನಿಕವಾಗಿ ವಿಶ್ಲೇಷಿಸುವ ಕಟುವಾಸ್ತವದ ಒಂದು ರೂಪಕವಾಗಿ ಈ ಚಿತ್ರ ಮೂಡಿ ಬಂದಿದೆ. ಐತಿಹ್ಯ, ಪುರಾಣ ಮತ್ತು ಸಮಕಾಲೀನ ವಾಸ್ತವಗಳನ್ನು ಮುಖಾಮುಖಿಯಾಗಿಸುವ ವಿಶಿಷ್ಟ ಕಥನ ಕಲೆಯನ್ನು ಗೀತಾತ್ಮಕವಾಗಿ ಕಟ್ಟಿ ಕೊಡಲಾಗಿದೆ.

**ಕಲಾವಿದರು:** ತಾರಾ, ಸುಂದರರಾಜ್, ಮಾನು, ಮೈಲಾರಿರಾವ್